# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ **ಬೆಳಗಾವಿ ವಿಭಾಗದ** ಸರ್ಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಗಳ ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 257 ಎಂಡಿಎಸ್ 2018 ದಿನಾಂಕ: 06.04.2018
2. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 257 ಎಂಡಿಎಸ್ 2018 ದಿನಾಂಕ: 11.04.2018

******

**ಪ್ರಸ್ತಾವನೆ:-**

ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ 2017-18ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2018-19ನೇ ಸಾಲಿನವರೆಗೆ ಮುಂದುವರೆಸಲು ಆದೇಶಿಸಿದೆ. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ರೂ.3576.64 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ **ಬೆಳಗಾವಿ ವಿಭಾಗದ** ಸರ್ಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಗಳ ನಿರ್ವಹಣೆಗೆ ಅತಿಥಿ ಶಿಕ್ಷಕರ ಗೌರವಧನ, ಕಛೇರಿ ಸ್ಟೇಶನರಿ (ಸೀಮೆಸುಣ್ಣ, ಪೇಪರ್, ರಿಜಿಸ್ಟರ್ಸ್, ಡೆಸ್ಟರ್ ಇತ್ಯಾದಿ), ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, ಡ್ರಾಯಿಂಗ್ ವಸ್ತುಗಳ ಖರೀದಿ, ಪ್ರಯೋಗಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, ಶೂ ಖರೀದಿ (Black 1 pair & White 1 pair) ಮುಂತಾದ ವೆಚ್ಚಗಳನ್ನು ಭರಿಸಲು 2017-18ನೇ ಸಾಲಿನಲ್ಲಿ ಮಂಜೂರಾದ 100 ಶಾಲೆಗಳ ವಿಭಾಗಾವಾರು ಒಟ್ಟು **ರೂ.42.50ಲಕ್ಷ (ನಲವತ್ತೆರಡು ಲಕ್ಷದ ಐವತ್ತು ಸಾವಿರ ರೂ.ಗಳು ಮಾತ್ರ)**ಗಳ ಅನುದಾನ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

**ಆದೇಶ**

**ಸಂಖ್ಯೆ: ಅಸಂನಿ/ಮೌಶಾ/ಅನುದಾನ/ಸಿಆರ್-67/ಬೆಳ/2018-19** **ದಿನಾಂಕ: 04.05.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ, ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ **ಬೆಳಗಾವಿ** ವಿಭಾಗದ ಸರ್ಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಗಳ ನಿರ್ವಹಣೆಗೆ ಅತಿಥಿ ಶಿಕ್ಷಕರ ಗೌರವಧನ, ಕಛೇರಿ ಸ್ಟೇಶನರಿ (ಸೀಮೆಸುಣ್ಣ, ಪೇಪರ್, ರಿಜಿಸ್ಟರ್ಸ್, ಡೆಸ್ಟರ್ ಇತ್ಯಾದಿ), ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, ಡ್ರಾಯಿಂಗ್ ವಸ್ತುಗಳ ಖರೀದಿ, ಪ್ರಯೋಗಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, ಕ್ರೀಡಾ ಮತ್ತು ಸಾಂಸ್ಕೃತಿಕ ವೆಚ್ಚ ಹಾಗೂ ಶೂ ಖರೀದಿ (Black 1 pair & White 1 pair) ಹಾಗೂ ಇತರೆ ವೆಚ್ಚಗಳನ್ನು ಭರಿಸಲು 2017-18ನೇ ಸಾಲಿನಲ್ಲಿ ಮಂಜೂರಾದ 100 ಶಾಲೆಗಳ ವಿಭಾಗಾವಾರು ಒಟ್ಟು **ರೂ.42.50ಲಕ್ಷ (ನಲವತ್ತೆರಡು ಲಕ್ಷದ ಐವತ್ತು ಸಾವಿರ ರೂ.ಗಳು ಮಾತ್ರ)**ಗಳ ಅನುದಾನ ಆಯಾ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ** ರವರಿಗೆ ಈ ಕೆಳಕಂಡಂತೆ ನಿಬಂಧನೆಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿದೆ.

**(ಪ್ರತಿ ಶಾಲೆಗೆ)**

| ಕ್ರ.ಸಂ | ವಿವರ | ಅವಧಿ | ದರ | ಶಿಕ್ಷಕರ ಸಂಖ್ಯೆ | ಒಟ್ಟು |
|---|---|---|---|---|---|
| 1 | ಅತಿಥಿ ಶಿಕ್ಷಕರ ಗೌರವಧನ(ಜೂನ್ ಹಾಗೂ ಜುಲೈ) | 2 ತಿಂಗಳು | 8000/- | 6 | 96000 |
| 2 | ಕಛೇರಿ ಸ್ಟೇಶನರಿ (ಸೀಮೆಸುಣ್ಣ, ಪೇಪರ್, ರಿಜಿಸ್ಟರ್ಸ್, ಡೆಸ್ಟರ್ ಇತ್ಯಾದಿ) | 6 ತಿಂಗಳು | - | - | 5000 |
| 3 | ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, ಡ್ರಾಯಿಂಗ್ ವಸ್ತುಗಳ ಖರೀದಿ, ಪ್ರಯೋಗಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, | ವಾರ್ಷಿಕ | - | - | 5000 |
| 4 | ಕ್ರೀಡಾ ಮತ್ತು ಸಾಂಸ್ಕೃತಿಕ ವೆಚ್ಚ | ವಾರ್ಷಿಕ | - | - | 5000 |
| 5 | ಶೂ ಖರೀದಿ (Black 1 pair & White 1 pair) | ವಾರ್ಷಿಕ | - | - | 50000 |
| 6 | ಸಂಬಂಧಪಟ್ಟ ಶಾಲೆಗಳ ಬೇಡಿಕೆ ಅನುಸಾರ ಇತರೆ ಸಾಮಾಗ್ರಿಗಳನ್ನು ಖರೀದಿಸಲು | - | - | - | 9000 |
| | | | | ಒಟ್ಟು | 1,70,000 |

Contd...2

**<u>ನಿಬಂಧನೆಗಳು:-</u>**

1) ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ಹುದ್ದೆಗಳ ಸಂಖ್ಯೆ ಹಾಗೂ ನೈಜ ಹಾಜರಾತಿ ಅನುಗುಣವಾಗಿ ಪಾವತಿಸತಕ್ಕದ್ದು.
2) ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೇ, ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ. ತಪ್ಪಿದ್ದಲ್ಲಿ ಮುಂದಿನ ಎಲ್ಲಾ ಆಗು ಹೋಗುಗಳಿಗೆ ತಮ್ಮನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು.
3) **<u>ಜಿಲ್ಲಾ ಅಧಿಕಾರಿಗಳು, ಮೌಲಾನಾ ಆಜಾದ್ ಮಾದರಿ ಶಾಲೆಗಳ ನೈಜ ಸಿಬ್ಬಂದಿಗಳ ವೇತನಕ್ಕೆ ಅವಶ್ಯವಿರುವ ಬೇಡಿಕೆ ಆಧಾರಿಸಿ ಸಂಬಂಧಪಟ್ಟ ಶಾಲಾ/ಕಾಲೇಜುಗಳ ಮುಖ್ಯಸ್ಥರಿಗೆ ಮರುಹಂಚಿಕೆ ಮಾಡತಕ್ಕದ್ದು.</u>**
4) ಹೊರಗುತ್ತಿಗೆ ಸಿಬ್ಬಂದಿಗಳನ್ನು ಕಡ್ಡಾಯವಾಗಿ ಕೆ.ಟಿ.ಪಿ.ಪಿ ಕಾಯ್ದೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಂತರ ಹೊರಸಂಪನ್ಮೂಲ ಎಜೆನ್ಸಿ ಮೂಲಕ ಪಡೆದಿರಬೇಕು.
5) ಹೊರಸಂಪನ್ಮೂಲ ಎಜೆನ್ಸಿಗೆ ಬಿಲ್ಲು ಪಾವತಿಸುವ ಮೊದಲು ನೌಕರರ ಬ್ಯಾಂಕ್ ಖಾತೆಗೆ ವೇತನ ಜಮಾ ಆಗಿರುವ ಹಾಗೂ ನಿಯಮಾನುಸಾರ PF,ESI,Service Tax ಮುಂತಾದ ಶಾಸನ ಬದ್ಧ ಕಟಾವಣೆಗಳು ಸಂಬಂಧಪಟ್ಟ ಇಲಾಖೆಗಳಿಗೆ ಜಮಾ ಆಗಿರುವ ಬಗ್ಗೆ. ಖಚಿತ ಪಡಿಸಿಕೊಳ್ಳತಕ್ಕದ್ದು.
6) ಶಾಲೆ/ಕಾಲೇಜುಗಳಿಗೆ ಮಂಜೂರಾದ ಹುದ್ದೆ ಹೊರತಾಗಿ ಹೆಚ್ಚುವರಿ ಸಿಬ್ಬಂದಿಗಳನ್ನು ಪಡೆದರೆ ಅದಕ್ಕೆ ನೇರವಾಗಿ ಕಛೇರಿ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಿ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಲಾಗುವುದು.
7) **ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಖರ್ಚು ಭರಿಸಿರುವ ಅನುದಾನದ ವಿವರ, (ಖಜಾನೆಯಿಂದ ಪಡೆದ 62ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.**

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2225-03-277-2-64 ಆಬ್ಜೆಕ್ಟ್ ಕೋಡ್ (059) ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆ ರಾಜ್ಯವಲಯ ಯೋಜನೆಯಡಿ 2018-19ನೇ ಸಾಲಿನಲ್ಲಿ ಒದಗಿಸಲಾದ ಆಯವ್ಯಯದಲ್ಲಿ ಭರಿಸತಕ್ಕದ್ದು.

**(ಅಕ್ರಂ ಪಾಷ)**
**ನಿರ್ದೇಶಕರು,**
**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**
**ಬೆಂಗಳೂರು.**

**<u>ಪ್ರತಿಯನ್ನು:-</u>**

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕೀಕರಣ ಕೇಂದ್ರ, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಗತ್ಯಕ್ರಮಕ್ಕಾಗಿ ಹಾಗೂ ಸಂಬಂದಪಟ್ಟ ಶಾಲೆಗಳ ಪ್ರಾಂಶುಪಾಲರಿಗೆ (ಜಿಲ್ಲಾ ಅಧಿಕಾರಿಗಳ ಮೂಲಕ)
6. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು.
7. ಲೆಕ್ಕಪತ್ರ ಶಾಖೆ.
8. ಹೆಚ್ಚುವರಿ ಪ್ರತಿ
9. ಕಛೇರಿ ಪ್ರತಿ.